**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆ: 5**03/2023

ಹೆಸರುಃ ಬೀರೇಶ್ ಪುಟ್ಟಕ್ಕನವರ್ ಸಿ.ಡಬ್ಲ್ಯೂಃ 4

ವಯಸ್ಸುಃ 35 ಪಿ.ಡಬ್ಲ್ಯೂಃ 2

ತಂದೆಃ ಲೇಟ್ ರಾಮಚಂದ್ರಪ್ಪ

ಉದ್ಯೋಗಃ ಪೊಲೀಸ್ ಪೇದೆ ಹರಿಹರ ನಗರ ಪೊ ಠಾಣೆ

ವಾಸ ಸ್ಥಳಃ ಹರಿಹರ

ಸಾಕ್ಷಿಗೆ ದಿನಾಂಕಃ 07-04-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

2018 ಏಪ್ರಿಲ್ ರಿಂದ 2024 ಆಗಸ್ಟ್ ಇಲ್ಲಿಯವರಗೆ ಪೊ.ಪೇದೆ ಆಗಿ ಚನ್ನಗಿರಿಯ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 13-06-2022 ರಂದು ನಾನು ಮತ್ತು ಚಾಸಾ 1 ಮತ್ತು 4 ರವರು ಮಸಣೀಕೆರೆ ಮತ್ತು ತಾವರಕೆರೆ ಗ್ರಾಮದಲ್ಲಿ ಗಸ್ತು ನಡೆಸುತ್ತಿದ್ದಾಗ ನನಗೆ 3.00 ಗಂಟೆಗೆ ಅಕ್ರಮವಾಗಿ ದನ ಸಾಗಾಣಿಕೆ ಮಾಡುತ್ತಿದ್ದಾರೆ ಒಂದು ದೂರವಾಣಿ ಕರೆ ಬರುತ್ತದೆ. ನಂತರ ಚಾಸಾ 1 ರವರಿಗೆ ತಿಳಿಸಿರುತ್ತೇನೆ. ನಂತರ 3.15 ಕ್ಕೆ ಘಟನಾ ಸ್ಥಳಕ್ಕೆ ತೆರಳಿ ಜೀಪನ್ನು ಮರೆಯಾಗಿ ನಿಲ್ಲಿಸಿ ನೋಡುತ್ತಿದ್ದಾಗೆ 3.30 ರ ಸುಮಾರಿಗೆ ಟಾಟಾ ಏಸ್ ಗೂಡ್ಸ್ ವಾಹನ ದುರ್ವಿಗೆರೆ ಗ್ರಾಮದ ಕಡೆಯಿಂದ ಬಂದಿರುತ್ತದೆ. ವಾಹನವನ್ನು ತಡೆದು ನಿಲ್ಲಿಸಿ ಪರಿಶೀಲನೆ ಮಾಡಿ ನೋಡಿದಾಗ ಅದರಲ್ಲಿ ಜಾನುವಾರುಗಳು ಇರುವುದು ಕಂಡು ಬಂದಿರುತ್ತದೆ. ಅವುಗಳನ್ನು ಮುದುಗುಂಡಿ ಗ್ರಾಮದಿಂದ ಕಡಿಮೆ ಬೆಲೆಗೆ ರೈತರಿಂದ ಖರೀದಿ ಮಾಡಿ ತಂದಿರುತ್ತೇವೆ. ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ವಾಹನದಲ್ಲಿದ್ದ ಚಾಲಕನ ಹಾಗೂ ಸಹಚರರ ಹೆಸರು ವಿಳಾಸ ಕೇಳಲಾಗಿ ಹಜರುದ್ದಿನ್ ಬಿನ್ ಫಯಾಜುದ್ದಿನ್ , ಹೊನ್ನೆಬಾಗಿ ಗ್ರಾಮ ಹಾಗೂ ಫಯಾಜುಲ್ಲಾ ತಂದೆ ಮಹಮದ್ ಉಸ್ಮಾನ್ , ಹೊನ್ನೆಬಾಗಿ ಗ್ರಾಮ ಎಂದು ತಿಳಿಸಿರುತ್ತಾರೆ. ಸದರಿ ಜಾನುವಾರುಗಳ ವೈದ್ಯಕೀಯ ಪ್ರಮಾಣ ಪತ್ರ ಹಾಗೂ ಪರವಾನಿಗೆಯನ್ನು ಪಡೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ . ಜಾನುವಾರುಗಳನ್ನು ಒಂದೇ ವಾಹನದಲ್ಲಿ ಹಿಂಸಾತ್ಮಕವಾಗಿ ತುಂಬಿರುತ್ತಾರೆ. ಸದರಿ ಜಾನುವಾರುಗಳನ್ನು ಹೊನ್ನೆಬಾಗಿ ಗ್ರಾಮದಿಂದ ಖಸಾಯಿ ಖಾನೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ.

ನಂತರ ಪಂಚರ ಸಮಕ್ಷಮ 3-45 ರಿಂದ 5-00 ಗಂಟೆವರೆಗೆ ಪಂಚನಾಮೆಯನ್ನು ಚಾಸಾ 1 ರವರು ನನ್ನ ಹಾಗೂ ಚಾಸಾ 2, 3 ಮತ್ತು 5 ರವರ ಸಮಕ್ಷಮ ಜರುಗಿಸಿರುತ್ತಾರೆ. ಸದರಿ ವಾಹನ ಸಂಃ ಕೆಎ 18 ಎ 8523 ನೇ ಟಾಟಾ ಏಸ್ ಗೂಡ್ಸ್ ವಾಹನ ಆಗಿರುತ್ತದೆ. ಸದರಿ ವಾಹನದಲ್ಲಿ ಕಪ್ಪು ಬಣ್ಣದ ಎರಡು ಹೋರಿಗಳು ಹಾಗೂ ಕಪ್ಪು ಹಾಗೂ ಬಿಳಿ ಮಿಶ್ರಿತ ಒಂದು ಹೋರಿ ಕಂಡು ಬಂದಿರುತ್ತದೆ.

ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಹಾಗೂ ಸಹಿಯನ್ನು 1(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ನಾನು, ಚಾಸಾ 1 ರಿಂದ 3 ಮತ್ತು 5 ಸಹಿ ಮಾಡಿರುತ್ತಾರೆ.

ಮಹಜರ್ ಸಮಯದಲ್ಲಿ ಪೊಲೀಸರು ಮೂರು ಭಾವಚಿತ್ರವನ್ನು ತೆಗೆದಿರುತ್ತಾರೆ . ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ . ಸದರಿ ಭಾವಚಿತ್ರವನ್ನು ಈಗಾಗಲೇ ನಿಪಿ.2 ರಿಂದ 4 ಎಂದು ಗುರುತಿಸಲಾಗಿದೆ.

ನಂತರ ಜಾನುವಾರುಗಳನ್ನು , ಆರೋಪಿಯನ್ನು ವಾಹನ ಸಮೇತ ಅಮಾನತುಪಡಿಸಿಕೊಂಡು ಠಾಣೆಗೆ ಹಾಜರಾಗಿರುತ್ತೇವೆ. ಸದರಿ ವಿಚಾರವಾಗಿ ಚಾಸಾ 1 ರವರು ವರದಿಯನ್ನು ನೀಡಿದ್ದು , ಸದರಿ ವಿಚಾರವಾಗಿ ನಾನು ಚಾಸಾ 8 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಮು.ಮಾ.ಗಳನ್ನು ನೋಡಿದರೆ ಗುರುತಿಸುತ್ತೇನೆ. ಅಮಾನತುಪಡಿಸಿಕೊಂಡ ವಾಹನವನ್ನು ದಿಃ 12-10-2022 ರಂದು ಉಪ ವಿಭಾಗಾಧಿಕಾರಿಯ ಆದೇಶದ ಮೇರೆಗೆ ವಾಹನವನ್ನು ಮಾಲೀಕರ ವಶಕ್ಕೆ ನೀಡಲಾಗಿರುತ್ತದೆ. ಸದರಿ ವಿಚಾರವಾಗಿ ಚಾಸಾ 1 ರವರು ಪಂಚನಾಮೆಯನ್ನು ಜರುಗಿಸಿ ವಾಹನವನ್ನು ಬಿಡುಗಡೆಗೊಳಿಸಿರುತ್ತಾರೆ. ಆ ಕಾಲಕ್ಕೆ ಎರಡು ಭಾವಚಿತ್ರಳನ್ನು ತೆಗೆದಿದ್ದು ಅವುಗಳನ್ನು ಈಗಾಗಲೇ ನಿಪಿ 8 ಹಾಗೂ 9 ಎಂದು ಗುರುತಿಸಲಾಗಿರುತ್ತದೆ. ಅಮಾನತುಪಡಿಸಿಕೊಂಡ 3 ಹೋರಿಗಳನ್ನು ಗೋಶಾಲೆಗೆ ಕಳುಹಿಸಲಾಗಿರುತ್ತದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ**

ಮಧ್ಯಾಹ್ನ 3.00 ಗಂಟೆಗೆ ಅಕ್ರಮ ಜಾನುವಾರುಗಳನ್ನು ಸಾಗಾಣಿಕೆ ಮಾಡುತ್ತಿರುವ ವಿಚಾರ ತಿಳಿದಿರುತ್ತದೆ, ನಂತರ ಘಟನಾ ಸ್ಥಳಕ್ಕೆ ನಾವು 3.15 ಕ್ಕೆ ತಲುಪಿರುತ್ತೇವೆ. ಗಸ್ತನ್ನು ಮಸಣಿಕೆರೆ ತಾವರಕೆರೆ ಗ್ರಾಮದಲ್ಲಿ ಯಾವ ಸಮಯದಿಂದ ಯಾವ ಸಮಯದವರೆಗೆ ಮಾಡಿರುತ್ತೇವೆ ಎಂದರೆ ಹೇಳಲು ಆಗುವುದಿಲ್ಲ ಎಂದರೆ ಸರಿ . ತಾವರಕೆರೆ ಮತ್ತು ದುರ್ವಿಗೆರೆಗೆ ಎರಡು ರಸ್ತೆಗಳಿವೆ ಎಂದರೆ ಸರಿ . ತಾವರಕೆರೆಯಿಂದ ವೀರಾಪುರ ಮತ್ತು ದುರ್ವಿಗೆರೆ ಯಿಂದ ಬುಕ್ಕಾಂಬುದಿಗೆ ಹೋಗುವ ರಸ್ತೆಗಳಿವೆ ಎಂದರೆ ಸರಿ . ಬುಕ್ಕಾಂಬುದಿಯಿಂದ ತಾವರಕೆರೆ ಗೆ ಒಂದೇ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎರಡು ರಸ್ತೆಗಳಿರುತ್ತವೆ ಎಂದು ನುಡಿಯುತ್ತಾರೆ. ಪಂಚರನ್ನು ನಾನೇ ಕರೆದು ತಂದಿರುತ್ತೇನೆ. ಪಂಚರ ವಾಸಸ್ಥಳದಿಂದ ಘಟನಾ ಸ್ಥಳಕ್ಕೆ ಸುಮಾರು 2 ಕಿ ಮೀ ಅಂತರ ಇರುತ್ತದೆ. ಪಂಚರು ಬೇರೆ ಬೇರೆ ಊರಿನವರು ಎಂದರೆ ಸರಿ . ಘಟನಾ ಸ್ಥಳದಿಂದ ದುರ್ವಿಗೆರೆ ಗೆ 2 ಕಿ ಮಿ ಹಾಗೂ ಘಟನಾ ಸ್ಥಳದಿಂದ ಕೊಡಗಿಗೆರೆ ಗೆ 2 ಕಿ ಮಿ ಅಂತರ ಇರುತ್ತದೆ. ಪಂಚರಿಗೆ ನೋಟೀಸ್ ಜಾರಿ ಮಾಡಿರುತ್ತೇವೆ. ಅಮಾನತುಪಡಿಸಿಕೊಂಡ ವಾಹನದ ಇಂಜಿನ್ ನಂಬರ್ ನನಗೆ ಗೊತ್ತಿಲ್ಲ. ದಾಳಿ ನಡೆಸಲು ನಾನು ಸ್ಥಳಕ್ಕೆ ಹೋಗಿರುವುದಿಲ್ಲ, ಠಾಣಾ ಅಂಕಿಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಲು ಸುಳ್ಳು ಹೇಳಿಕೆಯನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**sd/-**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 426/2018**

ಹೆಸರುಃ ವೀರಬಸಪ್ಪ ಕುಸ್ಲಾಪುರ ಸಿ.ಡಬ್ಲ್ಯೂಃ 1

ವಯಸ್ಸುಃ 37 ಪಿ.ಡಬ್ಲ್ಯೂಃ 2

ತಂದೆಃ ಲಕ್ಷ್ಮಪ್ಪ ಕುಸ್ಲಾಪುರ

ಉದ್ಯೋಗಃ ಪೊಲೀಸ್ ಸಬ್ ಇನ್ಸ್ ಪೆಕ್ಟರ್ , ಚಿತ್ರದುರ್ಗ

ವಾಸ ಸ್ಥಳಃ ಚಿತ್ರದುರ್ಗ

ಸಾಕ್ಷಿಗೆ ದಿನಾಂಕಃ 12-03-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

ದಿನಾಂಕಃ 30.05.2016 ರಿಂದ 30.06.2018 ರವರೆಗೆ ಪಿ ಎಸ್ ಐ ಆಗಿ ಚನ್ನಗಿರಿಯ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 01.04.2018 ರಂದು ಮದ್ಯಾಹ್ನ 2.30 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಬಾತ್ಮಿದಾರರಿಂದ ದೂರವಾಣಿ ಕರೆ ಮೂಲಕ ಚನ್ನಗಿರಿ ಠಾಣಾ ಸರಹದ್ದಿನ ಚನ್ನಗಿರಿ ತಾಲ್ಲೂಕಿನ , ಮಸಣಿಕೆರೆ ಕ್ರಾಸ್ ಹತ್ತಿರ ಇರುವ ಶ್ರೀದೇವಿ ಕೃಪ ಎಂಬ ಡಾಬಾದ ಮುಂದಿನ ರಸ್ತೆಯ ಪಕ್ಕದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ತಿಳಿದುಬಂದು ಮೇರೆಗೆ ಇಲಾಖಾ ಸಿಬ್ಬಂದಿಗಳಾದ ಚಾಸಾ.2 ರಿಂದ 4 ರವರ ಜೊತೆ ಇಲಾಖಾ ಜೀಪಿನಲ್ಲಿ ಘಟನಾ ಸ್ಥಳಕ್ಕೆ ಹೋಗುವ ಮಾರ್ಗ ಮಧ್ಯ ಮಸಣಿಕೆರೆ ಕ್ರಾಸ್ ನಿಂದಸ್ವಲ್ಪ ದೂರದಲ್ಲಿ ಚಾಸಾ.5 ಮತ್ತು 6 ರವರಿಗೆ ಸದರಿ ವಿಚಾರವನ್ನು ಪಂಚರಿಗೆ ತಿಳಿಸಿ ಒಪ್ಪಿದ ಮೇರೆಗೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿಸಿ ಘಟನಾ ಸ್ದಳಕ್ಕೆ ಮದ್ಯಾಹ್ನ 3.00 ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಘಟನಾ ಸ್ಥಳದಿಂದ ಸ್ವಲ್ಪ ದೂರದಲ್ಲಿ ಮರೆಯಲ್ಲಿ ನಿಂತು ನೋಡಿದಾಗ ಯಾರೋ ಒಬ್ಬ ಆಸಾಮಿಯು ಅಕ್ರಮವಾಗಿ ಪರವಾನಗಿ ಇಲ್ಲದೇ ಸಾರ್ವಜನಿಕ ಸ್ಥಳದಲ್ಲಿ ರಟ್ಟಿನ ಬಾಕ್ಸ್ ಗಳಲ್ಲಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ.

ನಾನು ಸಿಬ್ಬಂದಿ ಹಾಗೂ ಪಂಚರ ಸಮಕ್ಷಮ ಹಿಡಿಯಲು ಹೋದಾಗ ತಪ್ಪಿಸಿಕೊಂಡು ಆರೋಪಿಯು ಪರಾರಿ ಯಾಗಲು ಪ್ರಯತ್ನಿಸಿದಾಗ ಸುತ್ತುವರೆದು ಹಿಡಿದು ಹೆಸರು ವಿಳಾಸ ಕೇಳಲಾಗಿ ಶಿವು ತಂದೆ ಚಿನ್ನಸ್ವಾಮಿ , ಹಾಲಿ ವಾಸ ತಾವರಕೆರೆ ಗ್ರಾಮ , ಮೂಲತಃ ಸರತುಪಟ್ಟಿ ಗ್ರಾಮ , ತಮಿಳುನಾಡು ರಾಜ್ಯ ಎಂದು ತಿಳಿದುಬಂದಿರುತ್ತದೆ.

ನಂತರ ಆರೋಪಿಯ ಬಳಿ ಇದ್ದ ಅಕ್ರಮ ಮದ್ಯವನ್ನಿರಿಸಿದ್ದ ರಟ್ಟಿನ ಬಾಕ್ಸ್‌ಗ್ ಳನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಅಕ್ರಮ ಮದ್ಯಗಳಾದ -

1) 1 ರಟ್ಟಿನ ಬಾಕ್ಸ್ ನಲ್ಲಿ 90 ಎಂ ಎಲ್ ನ ಹೈ ವಾರ್ ಡಸ್ ವಿಸ್ಕಿಯ 85 ಟೆಟ್ರಾ ಪ್ಯಾಕ್ಗಳು ,

2) 1 ರಟ್ಟಿನ ಬಾಕ್ಸ್ ನಲ್ಲಿ 180 ಎಂ ಎಲ್ ನ ಬ್ಯಾಗ್ ಪೈಪರ್ ವಿಸ್ಕಿಯ 20 ಟೆಟ್ರಾ ಪ್ಯಾಕ್ಗಳು ,

3) 1 ರಟ್ಟಿನ ಬಾಕ್ಸ್ ನಲ್ಲಿ 180 ಎಂ ಎಲ್ ನ ಓಲ್ಡ್ ಟವರಿನ್ ವಿಸ್ಕಿಯ 20ಟೆಟ್ರಾ ಪ್ಯಾಕ್ಗಳು

4) 1 ರಟ್ಟಿನ ಬಾಕ್ಸ್ ನಲ್ಲಿ 650 ಎಂ ಎಲ್ ನ ಕಿಂಗ್ ಫಿಷರ್ ಬಿಯರ್ ನ 4 ಬಾಟಲ್ ಗಳು .

5) 1 ರಟ್ಟಿನ ಬಾಕ್ಸ್ ನಲ್ಲಿ 330 ಎಂ ಎಲ್ ನ ಕಿಂನಗ್ ಫಷರ್ ಬಿಯರ್ ನ 19 ಬಾಟಲ್ ಗಳನ್ನು ಅಕ್ರಮ ಮದ್ಯವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಹಾಗೂ ಅವುಗಳ ಅಂದಾಜು ಬೆಲೆ 7,172/-ಆಗಿರುತ್ತದೆ.

ಸದರಿ ಮದ್ಯದ ಟೆಟ್ರಾ ಪ್ಯಾಕ್ ಹಾಗೂ ಬಾಟಲಿಗಳನ್ನು ಚಾಸಾ 2 ರಿಂದ 6 ರವರ ಸಮಕ್ಷಮ 3.00 ಗಂಟೆಯಿಂದ 4 ಗಂಟೆಯವರಗೆ ಪಂಚನಾಮೆ ಜರುಗಿಸಿ ನಾನು ವಶಪಡಿಸಿಕೊಂಡು ಪ್ರತ್ಯೇಕವಾಗಿ ಬಿಳಿ ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿ ಬಾಯಿಯನ್ನು ದರದಿಂದ ಕಟ್ಟಿ ಕೆ ಜಿ ಎಸ್ ಎಂಬ ಅಕ್ಷರದಿಂದ ಮೊಹರನ್ನು ಹಾಕಿ ಅದಕ್ಕೆ ಪಂಚರ, ನನ್ನ ಸಹಿ ಇದ್ದ ಚೀಟಿಯನ್ನು ಅಂಟಿಸಿ ರುತ್ತೇನೆ. ಆರೋಪಿಯನ್ನು ಮದ್ಯ ಮಾರಾಟ ಮಾಡಲು ಪರವಾನಗಿ ವಿಚಾರಿಸಲಾಗಿ ಯವುದೇ ಪರವಾನಗಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.ಆರೋಪಿ ಮುಂದುವರೆದು ಸದರಿ ಮದ್ಯವನ್ನು ಶಾಂಬವಿ ಬಾರ್ ನ ಮಾಲಿಕರಾದ ಮಂಜಣ್ಣ ನವರು ಮಾರಾಟ ಮಾಡಲು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ.

ನಂತರ ಅಮಾನತ್ತುಪಡಿಸಿಕೊಂಡ ಮಾಲು, ಪಂಚನಾಮೆ ಮತ್ತು ಆರೋಪಿತರೊಂದಿಗೆ ದಿಃ 01.04.2018 ರ ಸಂಜೆ 5.00 ಗಂಟೆಗೆ ಠಾಣೆಗೆ ಹಾಜರಾಗಿ ವರದಿಯನ್ನು ತಯಾರಿಸಿ ಚಾಸಾ.8 ರವರಿಗೆ ಮುಂದಿನ ತನಿಖೆಗಾಗಿ ಪ್ರಕರಣವನ್ನು

ದಾಖಲಿಸುವಂತೆ ನೀಡಿರುತ್ತೇನೆ.

ನಾನು ಅಮಾನತ್ತು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು ಸಹಿಯನ್ನು ನಿಪಿ 1(ಬಿ ) ಎಂದು ಗುರುತಿಸಲಾಯಿತು.

ದೂರನ್ನು ಸಾಕ್ಷಿಯು ಈಗ ನೋಡಿ ಗುರುತಿಸಿದ್ದು ಸದರಿ ದೂರನ್ನು ನಿ ಪಿ 2 ಎಂದು ಗುರುತಿಸಲಾಯಿತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು .

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಸ್ತುಗಳನ್ನು ಈಗಾಗಲೇ ಮು.ಮಾ.ಸಂ.1 ರಿಂದ 5 ಎಂದು ಕ್ರಮವಾಗಿ ಗುರುತಿಸಲಾಗಿದೆ.

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ**

ಘಟನಾ ಸ್ದಳಕ್ಕೆ ಇಲಾಖಾ ಜೀಪಿನಲ್ಲಿ ಹೋಗಿರುತ್ತೇವೆ . ವಾಹನದ ನೊಂದಣಿ ಸಂಖ್ಯೆ ನನಗೆ ನೆನಪಿಲ್ಲ. ಪಂಚರಿಗೆ ನೋಟೀಸ್ ನೀಡಿದಾಗ ಸಮಯ 3.00 ಆಗಿತ್ತು. ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಮಾಹಿತಿ ಮದ್ಯಾಹ್ನ 2.30 ಗಂಟೆಗೆ ಬಂದಿರುತ್ತದೆ. ನಾವು ಸ್ಥಳಕ್ಕೆ ಹೋದಾಗ ಮದ್ಯಾಹ್ನ 3.00 ಆಗಿತ್ತು. ಘಟನಾ ಸ್ಥಳದಿಂದ ಮುಂದೆ ಪಂಚರನ್ನು ಅದೇ ರಸ್ತಯಲ್ಲಿ ಬರಮಾಡಿಕೊಂಡಿರುತ್ತೇವೆ ಎಂದರೆ ಸರಿ. ಮಸಣಿಕೆರೆ ಕ್ರಾಸ್ ಬಳಿ ಸುತ್ತಲೂ ಅಂಗಡಿಗಳು ಇವೆ ಎಂದರೆ ಸಾಕ್ಷಿಯು ನಾವು ಹೋದಾಗ ಯಾವುದೇ ಅಂಗಡಿಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಮಸಣಿಕೆರೆ ಕ್ರಾಸ್ ಬಳಿ ನಿರ್ದಿಷ್ಟಿತ ಬಸ್ ನಿಲುಗಡೆ ತಾಣ ಇರುತ್ತದೆ ಎಂದರೆ ಸರಿಯಲ್ಲ. ಮಸಣಿಕೆರೆ ಕ್ರಾಸ್ ನಿಂದ ಸ್ವಲ್ಪ ದೂರದಲ್ಲಿ ಬ್ರಾಂದಿ ಶಾಪ್ಗಳು ಇವೆ ಎಂದರೆ ಸರಿಯಲ್ಲ. ಪಂಚರಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಮಾನತುಪಡಿಸಿಕೊಂಡ ಮು.ಮಾ.ಸಂ.1 ರಿಂದ 5 ರಲ್ಲಿ,ರುವ ವಸ್ತುಗಳ ಮೇಲಿನ ಕ್ರಮ ಸಂಖ್ಯೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮು.ಮಾ.ನ್ನು ತೆಗೆದುಕೊಂಡು ಬಂದು

ಮಾರಾಟ ಮಾಡುತ್ತಿರಲಿಲ್ಲ ಹಾಗೂ ಪಂಚರ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ಮತ್ತು 2 ನ್ನು ಠಾಣೆಯಲ್ಲಿ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ದಾಳಿ ಮಾಡಲು ಹೋಗಿರುವುದಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ,ಮು.ಮಾ.ಗೂ , ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**